## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆಗುರುತಿನ ಪ್ರಶ್ನೆಸಂಖ್ಯೆ | (1289) 128 |
| ಸದಸ್ಯರಹೆಸರು | ಶ್ರೀ. ಕೆ.ಎಸ್‌ನವೀನ್ (ಸ್ಥಳೀಯಸಂಸ್ಥೆಗಳಕ್ಷೇತ್ರ) |
| ಉತ್ತರಿಸಬೇಕಾದಸಚಿವರು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |
| ಉತ್ತರಿಸಬೇಕಾದದಿನಾಂಕ | 13/03/2026 |
| ಪ್ರಶ್ನೆ | ಉತ್ತರ |
| ಅ) ರಾಜ್ಯದಲ್ಲಿ ಕಲ್ಯಾಣಕರ್ನಾಟಕಕ್ಕೆ ಒಳಪಡುವ ಎಷ್ಟು ಜಿಲ್ಲೆಗಳಿವೆ: | ರಾಜ್ಯದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಒಳಪಡುವ ಒಟ್ಟು 07 ಜಿಲ್ಲೆಗಳು ಇರುತ್ತವೆ. |
| ಆ) ಕಳೆದ ಮೂರು ವರ್ಷಗಳಲ್ಲಿ ಈ ಜಿಲ್ಲೆಗಳಲ್ಲಿ ಈವರೆಗೆ ಒಟ್ಟು ಎಷ್ಟು ಐಟಿ-ಬಿಟಿ ಕಂಪನಿಗಳು ಸ್ಥಾಪನೆ ಮಾಡಲಾಗಿದೆ. | ಕಳೆದ ಮೂರು ವರ್ಷಗಳಲ್ಲಿ ಈ ಜಿಲ್ಲೆಗಳಲ್ಲಿ ಈವರೆಗೆ<br><br>ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆ.ಡಿ.ಇ.ಎಂ)ನ ಮಾಹಿತಿ ಅನ್ವಯ ಕಲಬುರಗಿ ಜಿಲ್ಲೆಯಲ್ಲಿ ಸುಮಾರು 21 ಐಟಿ ಕಂಪನಿಗಳು ಸ್ಥಾಪನೆಯಾಗಿರುತ್ತವೆ.<br><br>**<u>ಬಳ್ಳಾರಿ ಜಿಲ್ಲೆಯಲ್ಲಿ ಜೈವಿಕ ಕ್ಷೇತ್ರದ 'ಇನ್ಕ್ಯುಬೇಷನ್ ಕೇಂದ್ರ' :</u>**<br><br>ಬೆಂಗಳೂರು ಬಯೋಇನ್ನೋವೇಷನ್ ಸೆಂಟರ್ ಸಂಸ್ಥೆಯು ಬಳ್ಳಾರಿ ಜಿಲ್ಲೆಯಲ್ಲಿ , ಆರೋಗ್ಯ, ಕೃಷಿ, ಹವಾಮಾನ ಮತ್ತು ಸುಸ್ಥಿರತೆಯ ಮೇಲೆ ಕೇಂದ್ರೀಕರಿಸಿದ ಗಣಿಗಾರಿಕೆ ಪುನಃಸ್ಥಾಪನೆಗೆ ಕೆ.ಎಂ.ಇ.ಆರ್.ಸಿ ಯ ಬೆಂಬಲದೊಂದಿಗೆ ರೂ. 55 ಕೋಟಿ ಗಳ ವೆಚ್ಚದಲ್ಲಿ 'ಇನ್ಕ್ಯುಬೇಷನ್ ಕೇಂದ್ರ' ವನ್ನು ಸ್ಥಾಪಿಸಲಾಗುವುದು. ಜೈವಿಕ ಸುಧಾರಣೆ, ಮಣ್ಣು ವರ್ಧನೆ, ವಾತಾವರಣ ಮತ್ತು ಭೂ ಪುನರ್ವಸತಿ, ಪರಿಸರ ಎಂಜಿನಿಯರಿಂಗ್ ಮತ್ತು ಸಮಗ್ರ ಪರಿಸರ ಸುಸ್ಥಿರತೆಯೊಂದಿಗೆ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸಲು ಜೈವಿಕ ವೈವಿಧ್ಯತೆಯನ್ನು ಬೆಳೆಸುವಂತಹ ಕ್ಷೇತ್ರಗಳಲ್ಲಿ ನವೋದ್ಯಮಗಳು ಮತ್ತು ಸಂಶೋಧನೆಗಳನ್ನು ಪೋಷಿಸುವ ಮೂಲಕ ಗಣಿಗಾರಿಕೆಯಿಂದ ಪರಿಸರ ಹಾನಿಗಳನ್ನು ಸರಿಪಡಿಸಲು ಈ ಕೇಂದ್ರವು ಭಾರತದಲ್ಲಿ ಮೊಟ್ಟ ಮೊದಲನೆಯ ಕೇಂದ್ರವಾಗಲಿದೆ. ಈ ಕೇಂದ್ರವನ್ನು ಸ್ಥಾಪಿಸಲು 4.74 ಎಕರೆ ಜಮೀನನ್ನು ಬಳ್ಳಾರಿಯಲ್ಲಿ ಈಗಾಗಲೇ ಕಾಯ್ದಿರಿಸಲಾಗಿದೆ.<br><br>**<u>ಕೃಷಿ ಮತ್ತು ಸಂಬಂಧಿತ ಸೇವೆಗಳ ಶ್ರೇಷ್ಠತೆಯ ಕೇಂದ್ರ:</u>**<br><br>ಉತ್ತರ ಕರ್ನಾಟಕ ಪ್ರದೇಶದ ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ನಾವೀನ್ಯತೆಯನ್ನು ಉತ್ತೇಜಿಸಲು, ಸಂವೇದಕಗಳು, ಡ್ರೋನ್ಗಳು, ಸ್ಪ್ರೇಯರ್‌ಗಳು, ರೋಬೋಟಿಕ್ |

ಕಳೆ ತೆಗೆಯುವ ಯಂತ್ರಗಳು ಇತ್ಯಾದಿಗಳನ್ನು ಒಳಗೊಂಡಿರುವ ವಿಶ್ವ ದರ್ಜೆಯ ಪ್ರಯೋಗಾಲಯವನ್ನು **ಶ್ರೇಷ್ಠತಾ ಕೇಂದ್ರವನ್ನು ಕೃಷಿಕಲ್ಪ ಫೌಂಡೇಶನ್** ವತಿಯಿಂದ ರೂ.16.50 ಕೋಟಿ ವೆಚ್ಚದಲ್ಲಿ ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿದೆ. ಕೃಷಿ ತಂತ್ರಜ್ಞಾನದ ನವೋದ್ಯಮಗಳು ಮಿಲ್ಲೆಟ್ ಡಿ ಹಸ್ಕಿಂಗ್, ಪೋರ್ಟಬಲ್ ಡ್ರೈಯರ್ಗಳು, ರೋಗ ಸಲಹಾ ಅಪ್ಲಿಕೇಶನ್ಗಳು, ಡ್ರೋನ್ ಸೇವೆಗಳು ಮುಂತಾದ ಬಳಕೆಯ ಸಂದರ್ಭಗಳಲ್ಲಿ ನಾವೀನ್ಯತೆಯನ್ನು ಅಭಿವೃದ್ಧಿಪಡಿಸಲು ಈ ಉತ್ಕೃಷ್ಟತಾ ಕೇಂದ್ರವು ಅನುವು ಮಾಡಿಕೊಡುತ್ತದೆ. ಈ ಮೂಲಕ, ಉತ್ತರ ಕರ್ನಾಟಕ ಪ್ರದೇಶದ ಕೃಷಿ ಮತ್ತು ಸಂಬಂಧಿತ ಸೇವೆಗಳ ನವೋದ್ಯಮಗಳಿಗೆ ಇನ್ಕ್ಯುಬೇಶನ್ ಬೆಂಬಲ ಮತ್ತು ಸಹ-ಕಾರ್ಯ ಸ್ಥಳದ ಮೂಲಕ ನಾವೀನ್ಯತೆಯನ್ನು ಉತ್ತೇಜಿಸಲು ಅನುವು ಮಾಡಿಕೊಡುತ್ತದೆ

**ಐಐಐಟಿ ರಾಯಚೂರಿನಲ್ಲಿ ಕೃತಕ ಬುದ್ಧಿಮತ್ತೆ ನವೀನತೆ ಮತ್ತು ಉದ್ಯಮಶೀಲತಾ ಶ್ರೇಷ್ಠತಾ ಕೇಂದ್ರ (CoE-AI):**

AI ಕ್ಷೇತ್ರದಲ್ಲಿ ನವೀನತೆ ಮತ್ತು ಉದ್ಯಮಶೀಲತೆಯನ್ನು ಬಲಡಿಸಲು ಕೃತಕ ಬುದ್ಧಿಮತ್ತೆಯ ಶ್ರೇಷ್ಠತಾ ಕೇಂದ್ರವನ್ನು ಐಐಐಟಿ ರಾಯಚೂರಿನಲ್ಲಿ ಸ್ಥಾಪಿಸಲು ಈಗಾಗಲೇ 2026-27 ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಈ ಕೇಂದ್ರದ ಉದ್ದೇಶವು ಉತ್ತರ ಕರ್ನಾಟಕದಾದ್ಯಂತ AI ಪ್ರತಿಭೆ, ಆಲೋಚನೆಗಳು ಮತ್ತು ಉದ್ಯಮಿಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಈ ಪ್ರದೇಶವನ್ನು ಕರ್ನಾಟಕ ಮತ್ತು ಭಾರತದ ವಿಶಾಲ AI ಹಾಗೂ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯೊಂದಿಗೆ ಜೋಡಿಸುವುದಾಗಿದೆ.

**ಬೆಂಗಳೂರು ಹೊರತು ಪಡಿಸಿ ಉಳಿದ ಭಾಗದಲ್ಲಿ ನವೋದ್ಯಮ ಪರಿಸರ ವ್ಯವಸ್ಥೆಯನ್ನು (Startup Ecosystem) ಅಭಿವೃದ್ಧಿಪಡಿಸಲು ಘೋಷಿಸಲಾದ LEAP ಕಾರ್ಯಕ್ರಮದ ಅಡಿ ಉತರ ಕರ್ನಾಟಕ ಜಿಲ್ಲೆಗಳ ಯುವ ಉದ್ಯಮಿಗಳಿಗೆ ಉತೇಜಿಸಲು ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:**

- **ಇನ್ನೋವೇಶನ್ ಲ್ಯಾಬ್ (Innovation Labs):** ಲೀಪ್ (Local Economy Accelerator Program) ಯೋಜನೆ ಅಡಿಯಲ್ಲಿ , ಈ ಕೆಳಕಂಡ ಶೈಕ್ಷಣಿಕ ಸಂಸ್ಥೆಗಳಲ್ಲಿ **ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ:**

| | |
|---|---|
| | 1. GOVERNMENT ENGINEERING COLLEGE TALAKAL - KOPPAL<br>2. NAVODAYA INSTITUTE OF TECHNOLOGY - RAICHUR<br>3. PROUDHADEVARAYA INSTITUTE OF TECHNOLOGY - VIJAYANAGARA<br><br>***<u>ಕಲಬುರ್ಗಿ ಜಿಲ್ಲೆಯಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆಗಾಗಿ ಪ್ರತ್ಯೇಕ ವಲಯ</u>*** :<br><br>ಕಲಬುರ್ಗಿ ಜಿಲ್ಲೆಯ ನಂದೂರಿನಲ್ಲಿರುವ ಕೆಸರಟಗಿಯ 3ನೇ ಹಂತದ KIADB ಯ ಕೈಗಾರಿಕಾ ಪ್ರದೇಶದ, ಒಟ್ಟು 595 ಎಕರೆ ಭೂಮಿಯಲ್ಲಿ, 36.90 ಎಕರೆ ಭೂಮಿಯನ್ನು ಎಲೆಕ್ಟ್ರಾನಿಕ್ ಉತ್ಪಾದನೆಗಾಗಿ ಮೀಸಲಿಡಲಾಗಿದೆ. ಜಾಗತಿಕ ಉತ್ಪಾದನಾ ಹೂಡಿಕೆಗಳನ್ನು ಆಕರ್ಷಿಸುವ ಅತ್ಯಾಧುನಿಕ ಮೂಲಸೌಕರ್ಯ, ಸುಸ್ಥಿರ ಸೌಲಭ್ಯಗಳು ಮತ್ತು ಪ್ಲಗ್ ಅಂಡ್-ಪ್ಲೇ ಕೈಗಾರಿಕಾ ವಲಯಗಳೊಂದಿಗೆ ವಿಶ್ವ ದರ್ಜೆಯ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸುವುದು ಇದರ ಉದ್ದೇಶವಾಗಿದೆ.<br><br>**ಕಲಬುರಗಿ ಜಿಲ್ಲೆಯಲ್ಲಿ ಕೃಷಿ ತಂತ್ರಜ್ಞಾನಕ್ಕಾಗಿನ ಶ್ರೇಷ್ಠತಾ ಕೇಂದ್ರ (CoE): ಕಲಬುರಗಿ ಜಿಲ್ಲೆಯಲ್ಲಿ Agribusiness Intelligence Centre (ABI)** ಕೇಂದ್ರ (ABI) ಅನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಈ ಪ್ರದೇಶದಲ್ಲಿ ಕೃಷಿ ಮತ್ತು ತಂತ್ರಜ್ಞಾನ ಆಧಾರಿತ ಕೃಷಿ ವ್ಯವಹಾರ ಅಭಿವೃದ್ಧಿಯನ್ನು ಉತ್ತೇಜಿಸಲು ಮೀಸಲಾದ ಕೇಂದ್ರವಾಗಿ ಸ್ಥಾಪಿಸಲಾಗುತ್ತಿದೆ. ಉತ್ಪಾದನೆ ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಆಧುನಿಕ ಕೃಷಿ ತಂತ್ರಜ್ಞಾನ ಪರಿಹಾರಗಳು, ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ಮೌಲ್ಯ-ಸರಪಳಿ ನಾವೀನ್ಯತೆಯನ್ನು ಸಂಯೋಜಿಸುವ ಮೂಲಕ ಕೃಷಿ ಪರಿಸರ ವ್ಯವಸ್ಥೆಯನ್ನು ಪರಿವರ್ತಿಸುವುದು ಈ ಉಪಕ್ರಮದ ಗುರಿಯಾಗಿದೆ. |
| ಇ) ಐಟಿ-ಬಿಟಿ ಕಂಪನಿಗಳನ್ನು ನಿರ್ಮಾಣ ಮಾಡುವ ಸಲುವಾಗಿ ಸರ್ಕಾರ ಈವರೆಗೆ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ? | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಬಳ್ಳಾರಿ ಜಿಲ್ಲೆಯಲ್ಲಿ 'ಬಳ್ಳಾರಿ ಬಯೋ ಇನ್ನೋವೇಶನ್ ಸೆಂಟರ್' ನಿರ್ಮಾಣಕ್ಕಾಗಿ 4 ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆ. ಹಾಗೂ ಸರ್ಕಾರದ ಅಧೀನದಲ್ಲಿರುವ ಕಿಯೋನಿಕ್ಸ್ ಸಂಸ್ಥೆಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಮುಖಾಂತರ 1.32 ಎಕರೆ ಭೂಮಿಯನ್ನು ಖರೀದಿಸಿದ್ದು, ಸದರಿ ಪ್ರದೇಶದಲ್ಲಿ ಈಗಾಗಲೇ ಐಟಿ ಪಾರ್ಕ್ ಅನ್ನು |

| | |
|---|---|
| | ಸ್ಥಾಪಿಸಲಾಗಿದೆ. ಈ ಐಟಿ ಪಾರ್ಕ್ ನಲ್ಲಿ ಸುಮಾರು 18 ಕಂಪನಿಗಳು ಕಾರ್ಯನಿರ್ವಹಿಸುತ್ತಿರುತ್ತವೆ.<br><br>ಮುಂದುವರೆದು ಐಟಿ-ಬಿಟಿ ವಲಯದ ನವೋದ್ಯಮ/ ಕಂಪನಿಗಳಿಗೆ ಸ್ಥಳೀಯ ಪ್ರತಿಭೆಗಳ ನವೀನ ಯೋಜನೆಗಳಿಗೆ ಮೂಲ ಮಾದರಿಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಆ ಮೂಲಕ ಹೊಸ ಕಂಪನಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ03, ಬೀದರ್ ನಲ್ಲಿ02 ಹಾಗೂ ಕಲುಬುರಗಿಯಲ್ಲಿ 02 ನ್ಯೂ ಏಜ್ ಇನ್ನೋವೇಶನ್ ಕೇಂದ್ರವನ್ನು ಸ್ಥಾಪಿಸಲಾಗಿದೆ.<br><br>ಕಳೆದ 03 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಗಳಿಗೆ ಸಂಬಂಧಿಸಿದಂತೆ ಒಟ್ಟು 72 ನವೋದ್ಯಮಗಳು ನೋಂದಣಿಯಾಗಿರುತ್ತವೆ. ಈಗಾಗಲೇ ಎಲಿವೇಟ್ ಯೋಜನೆಯಡಿಯಲ್ಲಿ ಈ ಪ್ರದೇಶದ ಸುಮಾರು 20 ನವೋದ್ಯಮಗಳಿಗೆ ಒಟ್ಟು ರೂ. 4.90 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.<br><br>ಪ್ರಾದೇಶಿಕ ಬೆಳವಣಿಗೆ ಮತ್ತು ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ COE in Agri & Allied Domain, Rural focussed intervention ಶ್ರೇಷ್ಠತೆಯ ಕೇಂದ್ರವನ್ನು ಕೃಷಿಕಲ್ಪ ಫೌಂಡೇಶನ್ ವತಿಯಿಂದ ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿದೆ. |

**ಐಟಿಬಿಟಿ/25/ಎಲ್‌ಸಿಎಂ/2026**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು